**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ನವಲಗುಂದ**

| | |
|---|---|
| ಸಿ.ಸಿ. ನಂಬರ್ | - 79/2024 |
| ಸಿ.ಡಬ್ಲ್ಯೂ | - 20 |
| ಪಿ.ಡಬ್ಲ್ಯೂ | - 09 |
| ಸಾಕ್ಷಿಯ ಹೆಸರು | - ರವಿಕುಮಾರ ಶಿವಲಿಂಗಪ್ಪ ಕಪ್ಪತ್ತನ್ನವರ |
| ವಯಸ್ಸು | - 44 ವರ್ಷ |
| ಉದ್ಯೋಗ | - ಸಿ ಪಿ ಐ, ನವಲಗುಂದ ವೃತ್ತ. |
| ವಾಸ ಸ್ಥಳ | - ನವಲಗುಂದ |

ದಿನಾಂಕಃ 26/12/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ ರವರಿಂದಃ**

1. ನಾನು 20-09-2023 ರಿಂದ ಇಲ್ಲಿಯವರೆಗೆ ಸಿ ಪಿ ಐ ಎಂದು ನವಲಗುಂದ ವೃತ್ತದಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 20-09-2023 ರಂದು ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-19 ರವರಿಂದ ಕಡತವನ್ನು ಪಡೆದುಕೊಂಡು, ದಿನಾಂಕಃ 26-09-2023 ರಂದು ಆರೋಪಿ ಠಾಣೆಗೆ ಹಾಜರಾಗಿದ್ದು, ಆತನನ್ನು ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸದರಿಯವನಿಂದ ಮೋಟಾರ ಸೈಕಲ್ ಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡು, ಸದರಿ ದಿನ ಮೋಟಾರ ಸೈಕಲ್ ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 06-10-2023 ರಂದು ವಿಧಿ ವಿಜ್ಞಾನ ಪ್ರಯೋಗಾಲಯ ಬೆಳಗಾವಿ ರವರಿಂದ ರಕ್ತದ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

3. ವಿಧಿ ವಿಜ್ಞಾನ ಪ್ರಯೋಗಾಲಯ ಬೆಳಗಾವಿ ರವರಿಂದ ರಕ್ತದ ಪರೀಕ್ಷಾ ವರದಿಗಳನ್ನು **ನಿಪಿ-13** ಮತ್ತು **14** ಹಾಗೂ ಅವುಗಳ ಮೇಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು, ಸಹಿಗಳನ್ನು **ನಿ ಪಿ-13(ಎ)** ಮತ್ತು **ನಿಪಿ-14(ಎ)** ಎಂದು ಗುರುತಿಸಲಾಯಿತು. ನಷ್ಟಭರ್ತಿ ಬಾಂಡ್ ನ್ನು **ನಿಪಿ-15** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-15(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಂ ಎಸ್ ಎಚ್ ವಕೀಲರಿಂದಃ**

ನಾನು ಅಪಘಾತ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ. ನಲವಡಿ ಟೋಲ್ ಗೇಟ್ ನ್ನು ನಾನು ನೋಡಿರುತ್ತೇನೆ. ಸದರಿ ಟೋಲ್ ಗೇಟ್ ನ ಎರಡೂ ಬದಿಗೆ ರಸ್ತೆ ತಡೆಗಳಿವೆ ಎಂದರೆ ಸರಿಯಲ್ಲ. ಸದರಿ ಟೋಲ್ ಗೇಟ್ ನಲ್ಲಿ ವಾಹನಗಳು ವೇಗದಿಂದ ಚಲಿಸಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ದ್ವಿಚಕ್ರ ವಾಹನಗಳು ವೇಗದಿಂದ ಚಲಿಸಬಹುದು ಎಂದು ನುಡಿದಿರುತ್ತಾರೆ. ಸದರಿ ಅಪಘಾತ ಮೃತನ ತಪ್ಪಿನಿಂದ ಆಗಿದ್ದರೂ ಸಹ ಆತನ ಕುಟುಂಬಕ್ಕೆ ಸಹಾಯವಾಗಲು ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**